(ಇಂದು ದಿನಾಂಕ 30-07-2022 ರಂದು ಸಾಕ್ಷಿದಾರರನ್ನು ಪುನಃ ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.)

**ಪಾಟೀ ಸವಾಲು - ಎದುರುದಾರರ ಪರ ಶ್ರೀ ಬಿ.ಡಿ.ಎಸ್. ವಕೀಲರಿಂದ-**

ನನ್ನ ಮುಖ್ಯ ವಿಚಾರಣಾ ಪ್ರಮಾಣಪತ್ರದಲ್ಲಿ ತಿಳಿಸಿರುವಂತಹ ಸ್ಥಳಕ್ಕೆ ನಾನು 30 ವರ್ಷಗಳ ಹಿಂದೆ ಪ್ರಥಮ ಬಾರಿಗೆ ಹೋಗಿದ್ದೆನು. ನಾನು ಸದರಿ ಸ್ವತ್ತಿಗೆ ಅನೇಕ ಬಾರಿ ಹೋಗಿರುತ್ತೇನೆ. ಸದರಿ ಸ್ವತ್ತಿನ ಚತುರ್ಗಡಿಯನ್ನು ಹೇಳಲು ಆಗುವುದಿಲ್ಲ. ಸದರಿ ಸ್ವತ್ತು ಸುಮಾರು 20 ಎಕರೆ ಇರಬಹುದು. ಸದರಿ ಸ್ವತ್ತು ಯಾರಿಗೆ ಮಂಜೂರು ಆಗಿದೆ ಎಂದು ನನಗೆ ಗೊತ್ತಿಲ್ಲ. ಸದರಿ ಸ್ವತ್ತಿನಲ್ಲಿ ಸುಮಾರು 300 ಅಡಿಕೆ ಮರ ಹಾಗೂ 50 ರಿಂದ 60 ತೆಂಗಿನ ಮರಗಳು ಇದ್ದವು. ಸದರಿ ಸ್ವತ್ತಿನಲ್ಲಿ ಒಂದು ಹಳೆಯದಾದ ಬಾವಿ ಇತ್ತು ಎಂದರೆ ಸರಿ. ಸದರಿ ಬಾವಿಗೆ ಪಂಪಸೆಟ್ ಅಳವಡಿಸಲಾಗಿತ್ತಾ ಎಂದರೆ ಸಾಕ್ಷಿಯು ನಾನು ಕಡೆಯದಾಗಿ 2016 ರಲ್ಲಿ ಸ್ವತ್ತಿಗೆ ಭೇಟಿ ನೀಡಿದ್ದು, ಆಗ ಸ್ವತ್ತಿಗೆ ಪಂಪಸೆಟ್ ಅಳವಡಿಸಿರಲಿಲ್ಲ ಎಂದು ನುಡಿಯುತ್ತಾರೆ.

ದಿನಾಂಕಃ 30-03-2016 ರಂದು ನಾನು ಸ್ವತ್ತಿನ ಬಳಿ ಕೆಲಸ ಮಾಡಲು ಹೋಗಿದ್ದು, ಅಲ್ಲಿ ಮಾಡುವ ಕೆಲಸವನ್ನು ನಾನು ಆ ದಿನವೇ ಪ್ರಾರಂಭ ಮಾಡಿರುತ್ತೇನೆ. ಆ ಸಂದರ್ಭದಲ್ಲಿ ಊರಿನಿಂದಲೂ ಸಹ ವ್ಯಕ್ತಿಗಳು ಕೆಲಸಕ್ಕೆ ಬಂದಿದ್ದರು. ಜೆ.ಸಿ.ಬಿ.ಯ ಮೂಲಕ ಬಾವಿ ತೆಗೆಯುವ ಕೆಲಸವನ್ನು ನಿರ್ವಹಿಸುತ್ತಿದ್ದೆವು. ನಾನು ಜೆ.ಸಿ.ಬಿ. ಆಪರೇಟರ್ ಅಥವಾ ಜೆ.ಸಿ.ಬಿ. ಯಂತ್ರಕ್ಕೆ ಸಂಬಂಧಪಟ್ಟಂತಹ ಕೆಲಸಗಳನ್ನು ನಿರ್ವಹಿಸುವ ವ್ಯಕ್ತಿ ಆಗಿರಲಿಲ್ಲ. ಆ ದಿನ ಬೆಳಿಗ್ಗೆ ಸುಮಾರು 10.00 ರಿಂದ 10.30 ಗಂಟೆಗೆ ಕೆಲಸವನ್ನು ಪ್ರಾರಂಭಿಸಿರುತ್ತೇವೆ. ಗಲಾಟೆಯು ಬೆಳಿಗ್ಗೆ ಸುಮಾರು 11.00 ಗಂಟೆಗೆ ಪ್ರಾರಂಭ ಆಗಿರುತ್ತದೆ. ಸ್ಥಳಕ್ಕೆ ಸುಮಾರು 35 ರಿಂದ 40 ಜನ ಬಂದಿದ್ದರು. ಸದರಿಯವರ ಹೆಸರು ಮತ್ತು ವಿವರ ನನಗೆ ಗೊತ್ತಿಲ್ಲ. ನನ್ನೊಂದಿಗೆ ಕೆಲಸಕ್ಕೆ ಬಂದಿದ್ದ ವ್ಯಕ್ತಿಗಳ ಬಳಿ ಸದರಿಯವರ ಹೆಸರು ಮತ್ತು ವಿವರಗಳನ್ನು ನಾನು ಕೇಳಿರುವುದಿಲ್ಲ.

ಜೆ.ಸಿ.ಬಿ. ಮೂಲಕ ಮಣ್ಣನ್ನು ತೆಗೆದು ಹಾಕುತ್ತಿದ್ದು ಆ ಮೂಲಕ ಬಾವಿಯನ್ನು ತೆಗೆಯಲಾಗುತ್ತಿತ್ತು. ಮಣ್ಣನ್ನು ಎಷ್ಟು ಅಡಿ ಆಳದವರೆಗೆ ತೆಗೆಯಲಾಗಿತ್ತು ಎಂದು ಹೇಳಲು ಆಗುವುದಿಲ್ಲ. ಗಲಾಟೆ ಆಗುವ ಪೂರ್ವದಲ್ಲಿ ಸುಮಾರು 3 ಟಿಪ್ಪರ ಲಾರಿಯಷ್ಟು ಮಣ್ಣನ್ನು ತೆಗೆಯಲಾಗಿತ್ತು. ನೆಲದಿಂದ ಸುಮಾರು 4 ರಿಂದ 5 ಪೂಟ್ ಆಳದವರೆಗೆ ಮಣ್ಣನ್ನು ನನ್ನ ಪ್ರಕಾರ ತೆಗೆಯಲಾಗಿತ್ತಾ ಎಂದರೆ ಸಾಕ್ಷಿಯು ಇರಬಹುದು, ನಿಖರವಾಗಿ ಹೇಳಲು ಆಗುವುದಿಲ್ಲ ಎಂದು ನುಡಿಯುತ್ತಾರೆ.

ಮೋಹನ ನಾಯ್ಕರವರು ನನಗೆ ಸುಮಾರು 30 - 35 ವರ್ಷಗಳಿಂದ ಪರಿಚಯ. ಮೋಹನ ನಾಯ್ಕರವರು ನನಗೆ ಆತ್ಮೀಯರಾದ ಕಾರಣ ನಾನು ಕೆಲಸಕ್ಕೆ ಹೋಗದೇ ಇದ್ದರೂ ಸಹ ಕೆಲಸಕ್ಕೆ ಹೋಗಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಿನಾಂಕಃ 30-03-2016 ರಂದು ಹೆಬ್ಬೈಲ್ ಗ್ರಾಮದವರು ಸ್ಥಳಕ್ಕೆ ಬಂದಿರುವುದಿಲ್ಲ ಹಾಗೂ ಯಾವುದೇ ಗಲಾಟೆ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಸದರಿ ದಿನಾಂಕದಂದು ನಾನೂ ಸಹ ಸ್ಥಳದಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ. ಸದರಿ ಸ್ವತ್ತು ಇತರರಿಗೆ ಮಂಜೂರು ಆಗಿದ್ದು ಅದನ್ನು ಹೊಡೆದುಕೊಳ್ಳುವ ಉದ್ದೇಶದಿಂದ ಸಲ್ಲಿಸಲಾದ ಅರ್ಜಿಗೆ ಪೂರಕವಾಗುವಂತೆ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ. ಸರಿ ಇದೆ.

ಪ್ರಧಾನ ಸಿವಿಲ್ ಜಡ್ಜ, ಕುಮಟಾ